ಹಗಲೂ ಅಲ್ಲದ ರಾತ್ರಿಯೂ ಅಲ್ಲದ ಸಂಜೆ ಎಂಬ ಸಮಯದ ಕುರಿತು ನನಗೆ ಬಾಲ್ಯದಿಂದಲೂ ಒಂದು ವಿಶಿಷ್ಟ ಸೆಳೆತ. ಇಳೆಗೆ ಸೂರ್ಯನನ್ನು ಕಳಿಸುವ ಸಂಕಟವಾದರೆ, ನಿಶೆಗೆ ಆಕಾಶವನಪ್ಪುವ ಧಾವಂತ. ಸರಿಯುವ ಬೆಳಕು, ಆವರಿಸುವ ಕತ್ತಲು ಏಕಕಾಲಕ್ಕೆ ವಿಜೃಂಭಿಸುವ ಸಂಧಿಕಾಲ. ಮೋಡದ ತುಂಬ ಕ್ಷಣಕ್ಷಣಕ್ಕೂ ಬದಲಾಗುವ ಬಣ್ಣದ ಮೆರವಣಿಗೆ. ಹೊಳೆಕೆನ್ನೆಯ ಮೇಲೆ ತಂಗಾಳಿಯ ಬರವಣಿಗೆ. ಇದು ಚಿತ್ತಚಾಂಚಲ್ಯಗೊಳ್ಳುವ ಸಮಯವಾಗಿದೆಯೆಂಬ ಕಾರಣದಿಂದಲೇ ಪೂರ್ವಿಕರು ಸಂಧ್ಯಾಕಾಲಗಳಲ್ಲಿ ಸೂರ್ಯನಿಗೆ ಅರ್ಘ್ಯ ಕೊಡುತ್ತಿದ್ದರು. ಮನಸ್ಸನ್ನು ಧ್ಯಾನಮಗ್ನವಾಗಿಸಿ ಸಂಧ್ಯಾವಂದನೆ ಮಾಡುತ್ತಿದ್ದರು. ಮನೆಗಳಲ್ಲಿ ಮಕ್ಕಳಿಗೆ ಭಜನೆ ಕಡ್ಡಾಯವಾಗಿತ್ತು. ನಾವು ಚಿಕ್ಕವರಿದ್ದಾಗ ದೀಪ ಹಚ್ಚಿಟ್ಟ ದೇವರೆದುರು ಸಾಲಾಗಿ ಕೂತು ಮಂತ್ರ, ಸ್ತೋತ್ರಗಳನ್ನು ಕೋರಸ್‌ನಲ್ಲಿ ಹಾಡುವಾಗ ಇಡೀ ಮನೆ ತನ್ನೆಲ್ಲ ಉದ್ವೇಗ, ಆತಂಕವನ್ನು ಕಳೆದುಕೊಂಡು ಒಂದು ಶರಣಾಗತ ಭಾವಕ್ಕೆ ಬಂದುಬಿಡುತ್ತಿತ್ತು. ಹೊರಜಗುಲಿಯ ಮೇಲೆ ದೇಶ ಆಳುವವರ ಧಿಮಾಕಿನಲ್ಲಿ ಕೂತ ಅಜ್ಜ–ಮಾವ–

